ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಮ್‌ಎಫ್‌ಸಿ ಹುನಗುಂದ ಇವರ ನ್ಯಾಯಾಲಯದಲ್ಲಿ

ಕ್ರಿಮಿನಲ್ ಮೊಕದ್ದಮೆ ನಂ: 1297/2018
ಸಿ.ಡಬ್ಲ್ಯೂ- 1    ಪಿ.ಡಬ್ಲ್ಯೂ-6

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀಶೈಲ ಬ್ಯಾಕೋಡ |
| ತಂದೆಯ ಹೆಸರು | : | ಕೆಂಚಪ್ಪ |
| ವಯಸ್ಸು | : | 41 ವರ್ಷ |
| ಉದ್ಯೋಗ | : | ಸಿಪಿಐ |
| ವಾಸಸ್ಥಳ | : | ಮೂಡಲಗಿ |

ದಿನಾಂಕ: 14-10-2025 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಸಸಅ ರವರಿಂದ:

ನಾನು ಡಿಸೆಂಬರ-2016 ರಿಂದ ಡಿಸೆಂಬರ-2017 ವರೆಗೆ ಅಮೀನಗಡ ಪೋಲಿಸ ಠಾಣೆಯಲ್ಲಿ ಪಿ.ಎಸ್.ಐ. ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ: 25-02-2017 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ 12.00 ಗಂಟೆಗೆ ಉಪನಾಳ ಎಸ್.ಸಿ. ಗ್ರಾಮದ ಹಳ್ಳದಲ್ಲಿ 1ನೇ ಆರೋಪಿ ತನ್ನ ಟ್ರ್ಯಾಕ್ಟರನಲ್ಲಿ ಅಕ್ರಮವಾಗಿ ಮರಳು ಕಳ್ಳತನ ಮಾಡಿಕೊಂಡು ತುಂಬಿಕೊಳ್ಳುತ್ತಿದ್ದಾನೆ ಎಂದು ಬಾತ್ಮಿ ಬಂದಿರುತ್ತದೆ. ಸದರಿ ಮಾಹಿತಿಯನ್ನು ಮೇಲಾಧಿಕಾರಿಗಳಿಗೆ ತಿಳಿಸಿ ಚಾಸಾ-6 ಮತ್ತು 7 ರವರಿಗೆ ಠಾಣೆಗೆ ಕರೆಯಿಸಿ ಮಾಹಿತಿ ವಿಷಯ ತಿಳಿಸಿ ಚಾಸಾ-6 ರವರಿಗೆ ಪಂಚರನ್ನು ಕರೆತರಲು ತಿಳಿಸಿರುತ್ತೇನೆ. ಅದರಂತೆ ಚಾಸಾ6 ರವರು ಚಾಸಾ-2 ಮತ್ತು 3 ರವರನ್ನು ಕರೆತಂದು ನನ್ನ ಮುಂದೆ ಹಾಜರಪಡಿಸಿರುತ್ತಾರೆ. ನಾನು ಚಾಸಾ-2 ಮತ್ತು 3 ರವರಿಗೆ ಮಾಹಿತಿಯನ್ನು ತಿಳಿಸಿ ಅವರು ಪಂಚರಾಗಲು ಕೇಳಿಕೊಂಡಾಗ ಅವರು ಒಪ್ಪಿಕೊಂಡರು. ನಂತರ ನಾವು ಮತ್ತು ಪಂಚರು ಹಾಗು ಸಿಬ್ಬಂದಿಯವರು ಕೂಡಿಕೊಂಡು ನಮ್ಮ ಸರಕಾರಿ ವಾಹನ ಸಂ.ಕೆಎ-29/ಜಿ-158 ನೇದ್ದರಲ್ಲಿ 12.15 ಗಂಟೆ ಠಾಣೆಯಿಂದ ಹೊರಟು ಗುಡೂರ ಮಾರ್ಗವಾಗಿ ಬಾತ್ಮಿ ಬಂದ ಸ್ಥಳಕ್ಕೆ ಹೋಗಿ ನಮ್ಮ ವಾಹನವನ್ನು ಸ್ವಲ್ಪ ದೂರದಲ್ಲಿ ನಿಲ್ಲಿಸಿ ನಾವು ಬಾತ್ಮಿ ಬಂದ ಸ್ಥಳಕ್ಕೆ ಹೋಗಿ ನೋಡಲಾಗಿ ಆರೋಪಿತರು ಮರಳನ್ನು ಟ್ರ್ಯಾಕ್ಟರದಲ್ಲಿ ತುಂಬಿಕೊಳ್ಳುವುದು ಕಂಡು ಬಂದಿತ್ತು. ಆಗ ನಮ್ಮನ್ನು ನೋಡಿ ಆರೋಪಿತರು ಓಡಿಹೋಗಲು ಪ್ರಯತ್ನಪಟ್ಟರು. ಚಾಸಾ-6 ರವರು ಹೋಗಿ ಟ್ರ್ಯಾಕ್ಟರ ಚಾವಿಯನ್ನು ತೆಗೆದುಕೊಂಡು ತಮ್ಮ ಜೇಬಿನಲ್ಲಿಟ್ಟುಕೊಂಡಿರುತ್ತಾರೆ. ಆಗ ಆರೋಪಿತರೆಲ್ಲರು ಚಾಸಾ-6 ರವರನ್ನು ಎಳೆದಾಡಿ ಜೇಬಿನಲ್ಲಿದ್ದ

ಟ್ರ್ಯಾಕ್ಟರ ಕೀಯನ್ನು ತೆಗೆದುಕೊಂಡು ಟ್ರ್ಯಾಕ್ಟರ ಹಾಗು ದ್ವಿಚಕ್ರ ವಾಹನವನ್ನು ಸ್ಥಳದಲ್ಲಿ ಬಿಟ್ಟು ಪರಾರಿಯಾದರು. ಟ್ರ್ಯಾಕ್ಟರನ್ನು ಪರಿಶೀಲಿಸಿದಾಗ ಟ್ರ್ಯಾಕ್ಟರನಲ್ಲಿ ಅಂದಾಜು ಅರ್ಧ ಟ್ರೇಲರನಷ್ಟು ಮರಳು ತುಂಬಿದ್ದು ಕಂಡು ಬಂದಿತ್ತು. ಟ್ರ್ಯಾಕ್ಟರ ಇಂಜೀನ ಪರಿಶೀಲಿಸಲಾಗಿ ಟ್ರ್ಯಾಕ್ಟರ ಇಂಜೀನ ನಂ.ಕೆಎ-29/ಟಿಎ-8318 ನೇದ್ದು ಇದ್ದು ಅದಕ್ಕೆ ಜೋಡಿಸಿದ ಟ್ರೇಲರ ನಂಬರ ಪ್ಲೇಟ ಹೊಂದಿರುವುದಿಲ್ಲ. ಸ್ಥಳದಲ್ಲಿ ಒಂದು ದ್ವಿಚಕ್ರ ವಾಹನ ಇತ್ತು ಅದು ಕೂಡಾ ಸಂಖ್ಯೆ ಇಲ್ಲದ ವಾಹನ ಇತ್ತು. ನಾವು ಪರಿಶೀಲಿಸಿದಾಗ ಆರೋಪಿತರು ಯಾವುದೇ ಅಧಿಕೃತ ಪರವಾಣಿಗೆ ಪಡೆಯದೆ ಮರಳನ್ನು ಕಳ್ಳತನ ಮಾಡಿಕೊಂಡು ತುಂಬುತ್ತಿದ್ದು ಕಂಡು ಬಂದಿತ್ತು. ನಂತರ ಪಂಚರ ಸಮಕ್ಷಮ ಪಂಚನಾಮೆಯನ್ನು 1.45 ರಿಂದ 2.45 ಗಂಟೆವರೆಗೆ ಜರುಗಿಸಿ ಟ್ರ್ಯಾಕ್ಟರ ಹಾಗು ಟ್ರೇಲರ ಮತ್ತು ಟ್ರೇಲರನಲ್ಲಿದ್ದ ಮರಳನ್ನು ಹಾಗು ಒಂದು ದ್ವಿಚಕ್ರ ವಾಹನವನ್ನು ಜಪ್ತಿಪಡಿಸಿಕೊಂಡಿರುತ್ತೇವೆ. ರಸಾಯನಿಕ ಪರೀಕ್ಷೆಗೋಸ್ಕರ 2 ಕೆ.ಜಿ. ಅಷ್ಟು ಮರಳನ್ನು ಶ್ಯಾಂಪಲ ಕುರಿತು ತೆಗೆದು ಪಂಚರ ಸಹಿ ಮಾಡಿ ಸೀಲ ಮಾಡಿ ಪಂಚನಾಮೆ ಕ್ರಮ ಜರುಗಿಸಿರುತ್ತೇನೆ. ನಂತರ ಜಪ್ತಿಪಡಿಸಿಕೊಂಡು ಟ್ರ್ಯಾಕ್ಟರ ಹಾಗು ಅದರ ಜೊತೆ ಜೋಡಿಸಿದ ಟ್ರೇಲರ ಮತ್ತು ದ್ವಿಚಕ್ರ ವಾಹನವನ್ನು ಠಾಣೆಗೆ ತಂದು ಹಾಜರಪಡಿಸಿ ಸರಕಾರಿ ತರ್ಫೆ ಪಿರ್ಯಾದಿಯನ್ನು ಚಾಸಾ-12 ರವರ ಮುಂದೆ ಅಕ್ರಮವಾಗಿ ಕಳ್ಳತನದಿಂದ ಮರಳು ತುಂಬುತ್ತಿದ್ದ ಬಗ್ಗೆ ಹಾಗು ಸರಕಾರಿ ನೌಕರನಾದ ಚಾಸಾ-6 ರವರಿಗೆ ಕರ್ತವ್ಯಕ್ಕೆ ಅಡ್ಡಿಪಡಿಸಿದ ಬಗ್ಗೆ ಸರಕಾರಿ ತರ್ಫೆ ಪಿರ್ಯಾದಿಯನ್ನು ನೀಡಿರುತ್ತೇನೆ. ದಿ: 23-03-2017 ರಂದು ತನಿಖಾಧಿಕಾರಿ ಮುಂದೆ ಆರೋಪಿತರ ಹೆಸರು ಮತ್ತು ದ್ವಿಚಕ್ರ ವಾಹನ ಸಂಖ್ಯೆ ಹಾಗು ಟ್ರೇಲರ ಸಂಖ್ಯೆ ಗೊತ್ತಾದ ಬಗ್ಗೆ ಪುನ: ಹೇಳಿಕೆ ನೀಡಿರುತ್ತೇನೆ. ಆರೋಪಿತರು ಆ ದಿನ ಠಾಣೆಗೆ ಹಾಜರಾದ ಮೇರೆಗೆ ಅವರನ್ನು ನೋಡಿ ಗುರುತಿಸಿರುತ್ತೇನೆ. ಆರೋಪಿತರನ್ನು ನೋಡಿದರೆ ನಾನು ಗುರುತಿಸಬಲ್ಲೆ. 1 ನೇ ಆರೋಪಿ ನ್ಯಾಯಾಲಯದ ಮುಂದೆ ಹಾಜರಿದ್ದು, 2 ರಿಂದ 4 ನೇ ಆರೋಪಿತರು ಈ ದಿನ ನ್ಯಾಯಾಲಯದ ಮುಂದೆ ಗೈರ ಹಾಜರಿದ್ದು ಆರೋಪಿತರ ಗುರುತಿಸುವಿಕೆ ಆರೋಪಿತರ ಪರ ವಕೀಲರು ಯಾವುದೇ ತಕರಾರು ಮಾಡಿರುವುದಿಲ್ಲ.

ಪಿರ್ಯಾದಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ-6 ಎಂದು, ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ರೇಡ ಪಂಚನಾಮೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-4 ಎಂದು ಗುರುತಿಸಿದ್ದು, ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-4(ಸಿ) ಎಂದು ಗುರುತಿಸಲಾಯಿತು. ರಸಾಯನಿಕ ಪರೀಕ್ಷೆಗಾಗಿ ತೆಗೆದ ಮರಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಎಮ್.ಓ-1 ಎಂದು ಗುರುತಿಸಲಾಯಿತು.

<u>ಪಾಟೀಸವಾಲುಃ **1** ರಿಂದ **4** ನೇ</u> ಆರೋಪಿತರ ಪರ ಶ್ರೀ. ಬಿ.ಎನ್.ಎಮ್. ವಕೀಲರಿಂದ:

ನನಗೆ 12.00 ಗಂಟೆಗೆ 1 ನೇ ಆರೋಪಿ ಅಕ್ರಮವಾಗಿ ಮರಳು ತುಂಬುತ್ತಿದ್ದ ಬಗ್ಗೆ ಮಾಹಿತಿ ಬಂದಿರುತ್ತದೆ. ಮರಳನ್ನು 1 ನೇ ಆರೋಪಿ ಅಕ್ರಮವಾಗಿ ಮರಳನ್ನು ತುಂಬುತ್ತಿದ್ದಾನೆಂದು ಮಾಹಿತಿ ಬಂದಿರುತ್ತದೆ. ಮಾಹಿತಿ ಬಂದ 5 ನಿಮಿಷಗಳಲ್ಲಿ ಚಾಸಾ-6 ರವರಿಗೆ ಪಂಚರನ್ನು ಕರೆತರಲು ತಿಳಿಸಿರುತ್ತೇನೆ. ಚಾಸಾ-6 ರವರು ಪಂಚರನ್ನು ಕರೆತರಲು ಅಮೀನಗಡಕ್ಕೆ ಹೋಗಿರುತ್ತಾರೆ. ಚಾಸಾ-6 ರವರು ನಡೆದುಕೊಂಡು ಹೋಗಿ ಪಂಚರನ್ನು ಕರೆದು ತಂದಿರುತ್ತಾರೆ. 5 ನಿಮಿಷದಲ್ಲಿ ಚಾಸಾ-6 ರವರು ಪಂಚರನ್ನು ಕರೆದು ತಂದು ನನ್ನ ಮುಂದೆ ಹಾಜರಪಡಿಸಿರುತ್ತಾರೆ. ಪಂಚರು ಯಾವ ಗ್ರಾಮದವರು ಮತ್ತು ಯಾವ ಕೆಲಸ ಮಾಡುತ್ತಾರೆ ಎಂದು ಮಾಹಿತಿ ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿ ಪಂಚರು ಅಮೀನಗಡದವರು ಇರುತ್ತಾರೆ ಅವರು ಕೂಲಿಕೆಲಸ ಮಾಡುತ್ತಾರೆ. ಗುನ್ಹೆ ಜಾಗೆಯಿಂದ ನಮ್ಮ ಠಾಣೆ 10 ರಿಂದ 12 ಕಿ.ಮೀ. ಅಂತರದಲ್ಲಿದೆ. ಗುನ್ಹೆ ಜಾಗೆಯಿಂದ ನಮ್ಮ ಠಾಣೆ 20 ಕಿ.ಮೀ. ಅಂತರದಲ್ಲಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಗುನ್ಹೆ ಜಾಗೆಯಿಂದ ನಮ್ಮ ಠಾಣೆ ಅಂದಾಜು 15 ಕಿ.ಮೀ. ಆಗಬಹುದು ಎಂದು ಸಾಕ್ಷಿ ನುಡಿಯುತ್ತಾರೆ. ಅಮೀನಗಡದಿಂದ ಗುಡೂರ 18 ಕಿ.ಮೀ. ಆಗುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅಮೀನಗಡದಿಂದ ಗುಡೂರ ಅಂದಾಜು 12 ರಿಂದ 13 ಕಿ.ಮೀ. ಆಗಬಹುದು ಎಂದು ಸಾಕ್ಷಿ ನುಡಿಯುತ್ತಾರೆ. ಅಮೀನಗಡದಿಂದ ಗುಡೂರ 18 ಕಿ.ಮೀ. ಇರುತ್ತದೆ ನಾನು ಅಂದಾಜು 12 ರಿಂದ 13 ಕಿ.ಮೀ. ಆಗುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಗುಡೂರದಿಂದ ಗುನ್ಹೆ ಸ್ಥಳ ಅಂದಾಜು 2 ರಿಂದ 3 ಕಿ.ಮೀ. ಆಗಬಹುದು. ಗುಡೂರದಿಂದ ಉಪನಾಳ ಎಸ್.ಸಿ. ಗ್ರಾಮದ 6 ಕಿ.ಮೀ. ಅಂತರದಲ್ಲಿದೆ ಎಂದರೆ ಸರಿಯಲ್ಲ. ಠಾಣೆಯಿಂದ ಹೊರಟಾಗ 12.15 ಗಂಟೆ ಆಗಿತ್ತು. ನಾವು ಗುಡೂರ ಮಾರ್ಗವಾಗಿ ಹೋಗುವಾಗ ಸಮಯವನ್ನು ನೋಡಿರುವುದಿಲ್ಲ. ಬಾತ್ಮಿ ಬಂದ ಸ್ಥಳಕ್ಕೆ ಹೋದಾಗ 12.55 ಗಂಟೆ ಆಗಿತ್ತು. ಬಾತ್ಮಿ ಬಂದ ಒಂದು ತಾಸಿಗೆ 5 ನಿಮಿಷ ಕಡಿಮೆ ಇದ್ದಾಗ ಗುನ್ಹೆ ಸ್ಥಳಕ್ಕೆ ಹೋಗಿರುತ್ತೇವೆಂದರೆ ಸರಿ. ಗುನ್ಹೆ ಜಾಗೆಯಿಂದ ನಮ್ಮ ವಾಹನವನ್ನು 5 ರಿಂದ 10 ಮೀಟರ ದೂರದಲ್ಲಿ ನಿಲ್ಲಿಸಿರುತ್ತೇವೆ. ನಾವು ನೇರವಾಗಿ ಗುನ್ಹೆ ಸ್ಥಳಕ್ಕೆ ಹೋಗಿರುತ್ತೇವೆ. ನಾವು ಗುನ್ಹೆ ಸ್ಥಳಕ್ಕೆ ಹೋದಾಗ ಯಾರು ಎಷ್ಟು ಜನ ಏನು ಮಾಡುತ್ತಿದ್ದರು ಎಂದರೆ ಸಾಕ್ಷಿ 1 ನೇ ಆರೋಪಿ ಹಾಗು ಇನ್ನು 3 ಜನರು ಮರಳನ್ನು ತುಂಬುತ್ತಿದ್ದರು. ಆರೋಪಿತರು ಮರಳನ್ನು ತುಂಬಲು ಯಾವ ದಿಕ್ಕಿಗೆ ಟ್ರ್ಯಾಕ್ಟರ ನಿಲ್ಲಿಸಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ( ಈ ಹಂತದಲ್ಲಿ ಆರೋಪಿತರ ಪರ ವಕೀಲರು ಆರೋಪಿತರು ಯಾವ ದಿಕ್ಕಿನಿಂದ ಟ್ರ್ಯಾಕ್ಟರನಲ್ಲಿ ಮರಳು ತುಂಬುತ್ತಿದ್ದರು ಎಂದು ಕೇಳಲಾಗಿ ಸದರಿ ಪ್ರಶ್ನೆ ಪ್ರಕರಣಕ್ಕೆ ಅಸಂಬಂದವಾಗಿದ್ದರಿಂದ

ತೀರಸ್ಕರಿಸಲಾಯಿತು) ಗುನ್ಹೆ ಸ್ಥಳಕ್ಕೆ ನಾವು ಹೋದಾಗ ನಮ್ಮನ್ನು ನೋಡಿ ಆರೋಪಿತರು ಪರಾರಿಯಾಗಿರುತ್ತಾರೆ. ಆರೋಪಿತರು ನಮ್ಮನ್ನು ನೋಡಿ ಟ್ರ್ಯಾಕ್ಟರನ್ನು ತೆಗೆದುಕೊಂಡು ಓಡಿಹೋಗಲು ಪ್ರಯತ್ನಿಸಿದರು. ಆರೋಪಿತರು ಯಾವುದೇ ಮರಳನ್ನು ಅಕ್ರಮವಾಗಿ ತುಂಬುತ್ತಿರಲಿಲ್ಲ ನಾವು ಅವರ ಮೇಲೆ ಸುಳ್ಳು ಪಿರ್ಯಾದಿಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಆರೋಪಿತರು ಟ್ರ್ಯಾಕ್ಟರ ಸಮೇತ ಓಡಿ ಹೋಗುವಾಗ ಚಾಸಾ-6 ರವರಿಂದ ಟ್ರ್ಯಾಕ್ಟರ ಚಾವಿಯನ್ನು ಕಸಿದುಕೊಂಡು ಹೋಗಿರುತ್ತಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ-6 ರವರು ಟ್ರ್ಯಾಕ್ಟರ ಚಾವಿಯನ್ನು ತಮ್ಮ ಜೇಬಿನಲ್ಲಿಟ್ಟುಕೊಂಡಾಗ ಆರೋಪಿತರು ಟ್ರ್ಯಾಕ್ಟರ ಚಾವಿಯನ್ನು ಕಸಿದುಕೊಂಡಿರುತ್ತಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ-6 ರವರನ್ನು ಯಾವ ಆರೋಪಿತರು ಹಿಡಿದುಕೊಂಡು ಯಾರು ಟ್ರ್ಯಾಕ್ಟರ ಚಾವಿಯನ್ನು ಕಸಿದುಕೊಂಡರು ಎಂದರೆ ಸಾಕ್ಷಿ 4 ಜನ ಆರೋಪಿತರು ಏಕಕಾಲಕ್ಕೆ ಬಂದು ಚಾಸಾ-6 ರವರನ್ನು ಹಿಡಿದುಕೊಂಡು ಟ್ರ್ಯಾಕ್ಟರ ಚಾವಿಯನ್ನು ಕಸಿದುಕೊಂಡಿರುತ್ತಾರೆಂದು ಸಾಕ್ಷಿ ನುಡಿಯುತ್ತಾರೆ. ಆರೋಪಿತರು ಏಕಕಾಲಕ್ಕೆ ಬಂದು ಚಾಸಾ-6 ರವರ ಹಿಡಿದುಕೊಂಡು ಟ್ರ್ಯಾಕ್ಟರ ಚಾವಿಯನ್ನು ಕಸಿದುಕೊಂಡಿರುತ್ತಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಯಾವುದೇ ಜಪ್ತಿ ಪಂಚನಾಮೆ ಮಾಡಿಲ್ಲ ಟ್ರ್ಯಾಕ್ಟರನ್ನು ಜಪ್ತಿಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಜಪ್ತಿಪಡಿಸಿಕೊಂಡ ಟ್ರ್ಯಾಕ್ಟರ ಯಾವ ಬಣ್ಣದು ಮತ್ತು ಯಾವ ಕಂಪನಿಯದು ಇತ್ತು ಎಂದರೆ ಸಾಕ್ಷಿ ಟ್ರ್ಯಾಕ್ಟರ ಸಂಖ್ಯೆಯನ್ನು ಮಾತ್ರ ನಾನು ಹೇಳಬಲ್ಲೆ ಎಂದು ಸಾಕ್ಷಿ ನುಡಿಯುತ್ತಾರೆ. ಟ್ರ್ಯಾಕ್ಟರಕ್ಕೆ ಜೋಡಿಸಿದ ಟ್ರೇಲರ ಯಾವ ಬಣ್ಣದು ಇತ್ತು ಎಂದರೆ ನನಗೆ ಹೇಳಲು ಬರುವುದಿಲ್ಲ. ಆರೋಪಿತರು ಯಾವುದೇ ತಪ್ಪನ್ನು ಮಾಡಿರುವುದಿಲ್ಲ ನಮ್ಮ ಮೇಲಾದಿಕಾರಿಗಳಿಗೆ ಅಂಕಿ ಸಂಖ್ಯೆಗೋಸ್ಕರ ಸುಳ್ಳು ಪಿರ್ಯಾದಿಯನ್ನು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಹುನಗುಂದ.